ಲಾಭಗಳಿಸದೇ ಇರುವುದಕ್ಕೆ ಮುಖ್ಯ ಕಾರಣಗಳು ಈ ಕೆಳಕಂಡಂತೆ ಇರುವುದು:

1) ನಿಗಮದ ಸ್ಥಾವರಗಳು ಬಹಳ ಹಳೆಯವಾಗಿದ್ದು, ಯಂತ್ರೋಪಕರಣಗಳ ಕಾರ್ಯಕ್ಷಮತೆ ಕುಂಠಿತಗೊಂಡಿದೆ.

2) ಯಂತ್ರೋಪಕರಣಗಳ ವಿದ್ಯುಚ್ಛಕ್ತಿಯ ಬಳಕೆ ಮತ್ತು ದರ ಹೆಚ್ಚಿದ್ದು, ಇದಕ್ಕೆ ತಗಲುವ ವೆಚ್ಚವೂ ಹೆಚ್ಚಾಗಿದೆ.

3) ಯಂತ್ರೋಪಕರಣಗಳ ದುರಸ್ಥಿ, ಬಿಡಿಭಾಗಗಳ ಜೋಡಣೆ ಮತ್ತಿತರ ಕಾರಣಗಳಿಂದ ನಿರ್ವಹಣಾ ವೆಚ್ಚದಲ್ಲಿ ಹೆಚ್ಚಳವು ಉಂಟಾಗಿದೆ.

4) ನಿಗಮದ ಯೋಜಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ದುಡಿಮೆ ಬಂಡವಾಳದ ಕೊರತೆ, ಬ್ಯಾಂಕಿಗೆ ಪಾವತಿಸುತ್ತಿರುವ ಹೆಚ್ಚಿನ ಬಡ್ಡಿ ಹಾಗೂ ಹೆಚ್ಚಿದ ಆಡಳಿತ ವೆಚ್ಚ ಹೊರೆ.

ಆ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು ತನ್ನ ಸ್ಥಾವರಗಳ ಆರ್ಥಿಕ ಮತ್ತು ತಾಂತ್ರಿಕ ಸಮೀಕ್ಷೆಗಾಗಿ ಪ್ರೊ. ಪಿ.ಕೆ. ಸಾಲ್ಯಾನ್‌ರವರ ನೇತೃತ್ವದಲ್ಲಿ ಏಕಸದಸ್ಯ ಸಮಿತಿಯನ್ನು ನೇಮಕಗೊಳಿಸಿದ್ದು, ಅವರು ತಮ್ಮ ವರದಿಯನ್ನು ನವಂಬರ್, 1995ರಲ್ಲಿ ಸಲ್ಲಿಸಿರುತ್ತಾರೆ. ಅವರ ಶಿಫಾರಸ್ಸುಗಳು ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ.

ವಿಷಯ:- ಮುಳಬಾಗಿಲು ತಾಲ್ಲೂಕಿನಲ್ಲಿ ಕೆ.ಇ.ಬಿ. ಉಪವಿಭಾಗ ಸ್ಥಾಪನೆ.

327 (2191) **ಶ್ರೀ ಆರ್. ಶ್ರೀನಿವಾಸ್ (ಮುಳಬಾಗಿಲು):-** ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಮುಳಬಾಗಿಲು ತಾಲ್ಲೂಕಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪ ವಿಭಾಗವನ್ನು ಪ್ರಾರಂಭಿಸುವ ವಿಷಯ ಯಾವ ಹಂತದಲ್ಲಿದೆ?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):-

ಆ) ಮುಳಬಾಗಿಲು ತಾಲ್ಲೂಕಿಗೆ ಮುಳಬಾಗಿಲಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಒಂದು ಉಪ ವಿಭಾಗವು 1975ರ ವರ್ಷದಿಂದಲೇ ಕಾರ್ಯ ನಿರ್ವಹಿಸುತ್ತಿದೆ.

ಪ್ರಸ್ತುತ ಮುಳಬಾಗಿಲು ತಾಲ್ಲೂಕಿಗೆ ಮತ್ತೊಂದು ಉಪ ವಿಭಾಗವನ್ನು ತೆರೆಯುವ ಅವಶ್ಯಕತೆ ಇರುವುದಿಲ್ಲ.

ವಿಷಯ:- 1995-96ನೇ ಸಾಲಿನಲ್ಲಿ ರಾಜ್ಯದ ನೀರಾವರಿ ಯೋಜನೆಗೆ ನಬಾರ್ಡ್ ಸಾಲ ನೀಡಿರುವುದು.

1255 (2009) **ಶ್ರೀ ಜಗದೀಶ್ ಶೆಟ್ಟರ (ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?